## ದಿನಾಂಕ : 07-05-2022 ರಂದು ಬೆಳ್ಳಿಗ್ಗೆ 11:00 ಗಂಟೆಗೆ ವಾರ್ಡ್-80 ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ-80 ಹೊಯ್ಸಳನಗರ ವಾರ್ಡ್ ಕಛೇರಿಯಲ್ಲಿ ದಿನಾಂಕ: 07-05-2022 ರಂದು ಬೆಳ್ಳಿಗ್ಗೆ 11:00 ಗಂಟೆಗೆ ವಾರ್ಡ್‌ನ ನೋಡಲ್ ಅಧಿಕಾರಿಯವರಾದ ಶ್ರೀ.ಎಂ.ಲೋಕೇಶ್ ರವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಮತ್ತು ಅಧಿಕಾರಿ / ನೌಕರರು ಸಭೆಯಲ್ಲಿ ಹಾಜರಾಗಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

1. ಶ್ರೀ. ಎಂ.ಲೋಕೇಶ್ – ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-80
2. ಶ್ರೀ. ಶಂಕರಪ್ಪ –ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ
3. ಶ್ರೀಮತಿ. ಚಿತ್ರ – ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-80
4. ಶ್ರೀ. ಗೌತಮ್ – ಸಹಾಯಕ ಅಭಿಯಂತರರು, ಬೆಸ್ಕಾಂ
5. ಶ್ರೀ. ಶಶಿಕುಮಾರ್ – ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂಎಸ್.ಎಸ್.ಬಿ
6. ಶ್ರೀ. ಪ್ರಭಾಕರ್ – ಕಿರಿಯ ಅಭಿಯಂತರರು, ಬೆಸ್ಕಾಂ,
7. ಶ್ರೀ. ನವೀನ್ – ಕಿರಿಯ ಆರೋಗ್ಯ ನಿರೀಕ್ಷಕರು,
8. ಶ್ರೀ. ಮಧು.ಎಸ್.ಎಂ – ಮಾರ್ಷಲ್
9. ಶ್ರೀ. ಹೇಮಂತ್ – ಮಾರ್ಷಲ್,
10. ಶ್ರೀಮತಿ. ವಿಮಲ –ಪಿ.ಹೆಚ್.ಸಿ.ಒ
11. ಶ್ರೀ. ಪ್ರಮೋದ್‌ಕುಮಾರ್– ಕಿರಿಯ ಹೆಚ್.ಎ.ಎಂ
12. ಶ್ರೀ. ಮಹದೇವ್ – ಕೆಲಸ ಪರಿವೀಕ್ಷಕರು ಬಿ.ಡಬ್ಲ್ಯೂಎಸ್.ಎಸ್.ಬಿ

**ಸದಸ್ಯರು ಮತ್ತು ಸ್ಥಳೀಯ ನಿವಾಸಿಗಳು**

1. ಶ್ರೀ. ಅಶೋಕ್ ಸಾರತಿ – ಸದಸ್ಯರು,
2. ಶ್ರೀ. ಕುಲಕರ್ಣಿ – ಸದಸ್ಯರು,
3. ಶ್ರೀ. ಸತೀಶ್ ರಾವ್ – ಸದಸ್ಯರು,
4. ಶ್ರೀ. ದೇವರಾಜ್ – ಸದಸ್ಯರು,
5. ಶ್ರೀ. ಭರತ್.ಕೆ – ಸದಸ್ಯರು
6. ಶ್ರೀ. ರಾಮ್‌ಮೋಹನ್ ಮೆನನ್ – ಸದಸ್ಯರು
7. ಶ್ರೀ. ಪಿ.ಕುಮಾರ್ – ಸದಸ್ಯರು ಮರ್ಫಿಟೌನ್
8. ಶ್ರೀ. ಅನೂಪ್ ಹೆಗಡೆ – ಸ್ಥಳೀಯ ನಿವಾಸಿಗಳು
9. ಶ್ರೀ. ಪಾರ್ತಿಬನ್ – ಸ್ಥಳೀಯ ನಿವಾಸಿಗಳು
10. ಶ್ರೀಮತಿ. ಮೀನಾ, ನಂ.629, ಇಂದಿರಾನಗರ 2ನೇ ಹಂತ–ಸ್ಥಳೀಯ ನಿವಾಸಿಗಳು
11. ಶ್ರೀಮತಿ. ಮಾಲಾ ಎಲಿಜಬೆತ್ – ಸ್ಥಳೀಯ ನಿವಾಸಿಗಳು
12. ಶ್ರೀ. ಎ.ಸಿ.ಶಕೀರಾ – ಸ್ಥಳೀಯ ನಿವಾಸಿಗಳು

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀ.ಶಂಕರಪ್ಪ, ಸಹಾಯಕ ಅಭಿಯಂತರರು, ಸದರಿ ಸಭೆಗೆ ಹಾಜರಾಗಿರುವ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸ್ವಾಗತಿಸಿದರು. ಹಿಂದಿನ ಸಭೆಯ ನಡವಳಿಗಳ ಕುರಿತು ತೆಗೆದುಕೊಂಡ ಕ್ರಮಗಳ ಬಗ್ಗೆ ಪ್ರಸ್ತಾಪಿಸಿ ಬಾಕಿ ಇರುವ ದೂರುಗಳಿಗೆ ಸಂಬಂಧಿಸಿದಂತೆ ಕ್ರಮ ವಹಿಸಲಾಗುವುದೆಂದು ತಿಳಿಸಿ ಸಭೆಯನ್ನು ಪ್ರಾರಂಭಿಸಿದರು.

- 9ನೇ 'ಎ' ಮುಖ್ಯರಸ್ತೆಯ ಪಾದಚಾರಿ ಮಾರ್ಗದ ಮೇಲೆ 100 ಕೆ.ವಿ ಜೆನರೇಟರ್ ಅಳವಡಿಸಲಾಗಿದ್ದು, ಇದನ್ನು ಕೂಡಲೇ ಸ್ಥಳಾಂತರಿಸಲು ಹಾಗೂ 2ನೇ ಅಡ್ಡರಸ್ತೆ ಡಿಫೆನ್ಸ್ ಕಾಲೋನಿ ಹಾಗೂ ತಾಮರಕುಮಾರನ್ ರಸ್ತೆ ಬದಿಯಲ್ಲಿರುವ ಟ್ರಾನ್ಸ್‌ಫಾರಂಗಳನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲು ಸ್ಥಳೀಯ ನಿವಾಸಿಗಳು ಬೆಸ್ಕಾಂ ರವರಿಗೆ ಸಭೆಯಲ್ಲಿ ತಿಳಿಸಿದರು.



Scanned with CamScanner
Scanned with CamScanner

(ಕ್ರಮ:– ಬೆಸ್ಕಾಂ ಸಹಾಯಕ ಅಭಿಯಂತರರು)

- ವಾರ್ಡ್ ಸಂಖ್ಯೆ:80 ರ ವ್ಯಾಪ್ತಿಯಲ್ಲಿನ ಪ್ಲಾಸ್ಟಿಕ್ ಫ್ಯಾಕ್ಟರಿ ಪ್ರದೇಶ ವ್ಯಾಪ್ತಿಯಲ್ಲಿ ಕಸದ ಸಮಸ್ಯೆ ಉಲ್ಬಣಗೊಂಡಿದ್ದು, ಕೂಡಲೇ ಇದನ್ನು ವಾರ್ಡ್‌ನ ಮಾರ್ಷಲ್‌ಗಳೊಂದಿಗೆ ನಿಯಂತ್ರಣ ಮಾಡಲು, ಹಾಗೂ 5ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ 5ನೇ ಅಡ್ಡರಸ್ತೆ, 10ನೇ 'ಎ' ಅಡ್ಡರಸ್ತೆ, ಇಂದಿರಾನಗರ 2ನೇ ಹಂತ ಮತ್ತು ಬಿನ್ನಿಮಂಗಲ ಪ್ರದೇಶದಲ್ಲಿನ ಕಸ ವಿಲೇವಾರಿ ಹಾಗೂ ವಿಂಗಡಣೆಯನ್ನು ರಾ ಕ್ರಿಸ್ಟಲ್ ನಿಯೋಜಯಿಂದ ಘನತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಕಿರಿಯ ಆರೋಗ್ಯ ಪರಿವೀಕ್ಷಕರವರಿಗೆ ಸ್ಥಳಿಯರು ಕೋರಿದರು
  (ಕ್ರಮ:–ಕಿರಿಯ ಆರೋಗ್ಯ ಪರಿವೀಕ್ಷಕರು–ಘನತ್ಯಾಜ್ಯ ನಿರ್ವಹಣೆ)
- ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಕೋವಿಡ್ ಪ್ರಕರಣಗಳು ಪತ್ತೆಯಾಗಿರುವುದಿಲ್ಲವೆಂದು ಹಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿದರು.
- ವಾರ್ಡ್ ಸಂಖ್ಯೆ:80 ರ 16ನೇ ಅಡ್ಡರಸ್ತೆ ಮತ್ತು 17ನೇ ಅಡ್ಡರಸ್ತೆ ಮುಖ್ಯರಸ್ತೆ, 2ನೇ ಹಂತ, ಇಂದಿರಾನಗರದಲ್ಲಿ ರಸ್ತೆ ಡಾಂಬರೀಕರಣ ಮಾಡಲಾಗಿದ್ದು, ಕೆಲವು ಮನೆಗಳ ರ್‍ಯಾಂಪ್‌ಗಳನ್ನು ಕಾಂಕ್ರೀಟ್‌ನಿಂದ ನಿರ್ಮಾಣ ಮಾಡಲಾಗಿದ್ದು, ಅವುಗಳನ್ನು ತೆರವುಗೊಳಿಸಿ ನಿಗಧಿತ ಅಗಲಕ್ಕೆ ಡಾಂಬರೀಕರಣ ಮಾಡಲು ಕೈಗೊಳ್ಳಲು ಹಾಗೂ 6ನೇ 'ಎ' ಮುಖ್ಯರಸ್ತೆ ಮತ್ತು 6ನೇ 'ಬಿ' ಮುಖ್ಯರಸ್ತೆಯ ಚರಂಡಿಗಳಲ್ಲಿ ಹೂಳನ್ನು ತೆಗೆಯಲು ಹಾಗೂ 9ನೇ ಮುಖ್ಯರಸ್ತೆ ಮತ್ತು 10ನೇ ಮುಖ್ಯರಸ್ತೆಯ ಜೈನ್ ಕಾಲೇಜು ಸುತ್ತ–ಮುತ್ತಲಿನ ಅಡ್ಡರಸ್ತೆಗಳಿಗೆ ಡಾಂಬರೀಕರಣ ಕಾಮಗಾರಿಯನ್ನು ಕೈಗೊಳ್ಳಲು, ಡಿಫೆನ್ಸ್ ಕಾಲೋನಿ 4, 5, ನೇ ಲಿಂಕ್ ರಸ್ತೆ ಮತ್ತು 6ನೇ ಮುಖ್ಯರಸ್ತೆಗಳು ಮಳೆಯಿಂದಾಗಿ ಇತ್ತೀಚೆಗೆ ಜಲಾವೃತವಾಗುತ್ತಿದ್ದು, ಕೂಡಲೇ ಹಾಲಿ ಚರಂಡಿಯಿಂದ ಹೂಳು ತೆಗೆದು ಎತ್ತರಗೊಳಿಸಿ ಬೃಹತ್ ನೀರುಗಾಲುವೆಗೆ ಸಂಕಲ್ಪ ಕಲ್ಪಿಸಲು, ಡಿಫೆನ್ಸ್ ಕಾಲೋನಿಯ ಆಟದ ಮೈದಾನದಲ್ಲಿ ಕಾರ್ಮಿಕರ ಶೆಡ್‌ಗಳನ್ನು ಕೂಡಲೇ ತೆರವುಗೊಳಿಸಲು, ಅನುಪಯುಕ್ತ ವಸ್ತುಗಳನ್ನು ತೆರವುಗೊಳಿಸಲು(ಡೆಬ್ರಿಸ್), ಡಿಫೆನ್ಸ್ ಕಾಲೋನಿಯ ಸಾರ್ವಜನಿಕ ಶೌಚಾಲಯ ನಿರ್ವಹಣೆ ಮಾಡುವುದು, ಏರ್ಟೆಲ್ ಹಾಗೂ ಜಿಯೋ ಕಂಪನಿಯವರು ಅನಧಿಕೃತವಾಗಿ ಕೇಬಲ್‌ಗಳನ್ನು ಅಳವಡಿಸಿ ಜಂಕ್ಷನ್ ರಸ್ತೆ ಮಟ್ಟಕ್ಕಿಂತ ಮೇಲೆ ಅಳವಡಿಸುತ್ತಿರುವುದನ್ನು ಕೂಡಲೇ ತಡೆಗಟ್ಟಲು ಕ್ರಮ ವಹಿಸುವುದು ಹಾಗೂ ರಸ್ತೆ ಬದಿಯಲ್ಲಿ ಹಲವು ದಿನಗಳಿಂದ ನಿಲುಗಡೆ ಮಾಡಿರುವ ಹಳೆಯ ಕೆಟ್ಟು ಹೋದ ವಾಹನಗಳನ್ನು ಸ್ಥಳೀಯ ಪೊಲೀಸ್ ಸಿಬ್ಬಂಧಿಯವರೊಂದಿಗೆ ತೆರವು ಕಾರ್ಯಾಚಣೆ ಮಾಡುವುದು ಹಾಗೂ ಪಾದಚಾರಿ ಮಾರ್ಗ ಒತ್ತುವರಿ, ಫ್ಲೆಕ್ಸ್ ಮತ್ತು ಬ್ಯಾನರ್ಸ್‌ಗಳನ್ನು ತೆರವುಗೊಳಿಸಲು, ಮರ್ಫಿಟೌನ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಾಲಿ ಇರುವ ಚರಂಡಿ ಮತ್ತು ಕಲ್‌ವರ್ಟ್‌ಗಳನ್ನು ಸ್ವಚ್ಛಗೊಳಿಸುವುದು ಹಾಗೂ ಬಾಕಿ ಉಳಿದಿರುವ ರಸ್ತೆಗಳಿಗೆ ಡಾಂಬರೀಕರಣ ಮಾಡಲು ಸಭೆಯಲ್ಲಿ ಸ್ಥಳೀಯರು ತಿಳಿಸಿದರು. ಎಲ್ಲಾ ದೂರುಗಳಿಗೆ ಸ್ಪಂದಿಸಿ ಕೂಡಲೇ ಕ್ರಮ ವಹಿಸುವುದಾಗಿ ಕಾಮಗಾರಿ ಇಲಾಖೆಯ ವಾರ್ಡ್‌ನ ಸಹಾಯಕ ಅಭಿಯಂತರರು ತಿಳಿಸಿದರು.
  (ಕ್ರಮ:– ಕಾಮಗಾರಿ ಇಲಾಖೆಯ ವಾರ್ಡ್‌ನ ಸಹಾಯಕ ಅಭಿಯಂತರರು)

ಮೇಲ್ಕಂಡಂತೆ ಚರ್ಚಿಸಲಾಗಿರುವ ಎಲ್ಲಾ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಆಯಾ ಇಲಾಖೆಯ ಅಧಿಕಾರಿಗಳಿಗೆ ಕೂಡಲೇ ಕ್ರಮವಹಿಸಲು ಹಾಗೂ ಕ್ರಮ ವಹಿಸಿರುವ ಬಗ್ಗೆ ಮುಂದಿನ ಸಭೆಗೆ ಹಾಜರುಪಡಿಸಲು ತಿಳಿಸಿ ಮತ್ತು ಮುಂದಿನ ಸಭೆಗೆ ತೋಟಗಾರಿಕಾ ಇಲಾಯವರು, ಪೊಲೀಸ್ ಇಲಾಖೆ (ಕಾ &ಸು) ಮತ್ತು ಸಂಚಾರ ಇಲಾಖೆರವರು ಕಡ್ಡಾಯವಾಗಿ ಸಭೆಗೆ ಹಾಜರಾಗುವಂತೆ ಕ್ರಮ ವಹಿಸಲು ಕಾರ್ಯದರ್ಶಿರವರಿಗೆ ಸೂಚಿಸಿ, ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ವಾರ್ಡ್ ಸಮಿತಿ–80

7/5/22
ಅಧ್ಯಕ್ಷರು
ವಾರ್ಡ್ ಸಮಿತಿ, ವಾರ್ಡ್ 80
ಹಾಗೂ ನೋಡಲ್ ಅಧಿಕಾರಿಗಳು,
ವಾರ್ಡ್ 80



Scanned with CamScanner

Scanned with CamScanner